# ವಾಟ್ಸ್ಆ್ಯಪ್: ಮತ್ತೆ ನವನವೀನ

ಕೆಲವು ತಿಂಗಳ ಹಿಂದೆ ಹಲವು ಫೀಚರ್‌ಗಳನ್ನು ಪರಿಚಯಿಸಿ ಬಳಕೆದಾರರ ಗಮನ ಸೆಳೆದಿದ್ದ ವಾಟ್ಸ್ಆ್ಯಪ್, ಈಗ ಮತ್ತಷ್ಟು ಹೊಸತಾಗಿದೆ.

■ **ಶಶಿಕುಮಾರ್ ಸಿ.**




ಸದ್ದಿಲ್ಲದೆ ಸಿಹಿ ಸುದ್ದಿ ನೀಡಿ ಬಳಕೆದಾರರನ್ನು ಖುಷಿಗೊಳಿಸುತ್ತಿದ್ದ ವಾಟ್ಸ್ಆ್ಯಪ್, ಈಚೆಗೆ ಒಟ್ಟೊಟ್ಟಾಗಿ ಹಲವು ಹೊಸ ಫೀಚರ್‌ಗಳನ್ನು ನೀಡಿದೆ. ಜೊತೆಗೆ ಚಾನಲ್ ಇಂಟರ್‌ಫೇಸ್, ವೆಬ್ ಆವೃತ್ತಿಯಲ್ಲೂ ಹೊಸತನ್ನು ಪರಿಚಯಿಸಿದೆ.

'ಮೆಸೇಜಿಂಗ್ ಫೀಲ್' ಹೆಚ್ಚಿಸಲು ಹಲವು ಟೆಕ್ಸ್ಟ್ ಫಾರ್ಮ್ಯಾಟಿಂಗ್ ಆಯ್ಕೆಗಳನ್ನು ನೀಡಿದೆ. ಇದರಿಂದ ಬಳಕೆದಾರರು, ತಮ್ಮ ಮೆಸೇಜ್‌ಗಳನ್ನು ಇನ್ನಷ್ಟು ಉತ್ತಮಗೊಳಿಸಬಹುದು. ಈ ಆಯ್ಕೆಗಳಲ್ಲಿ ಬುಲೆಟ್ ಹಾಗೂ ಸಂಖ್ಯಾ ಪಟ್ಟಿ, ಬ್ಲಾಕ್ ಕೋಟ್‌ಗಳು ಮತ್ತು ಇನ್‌ಲೈನ್ ಕೋಡ್‌ಗಳು ಮೊದಲ ಸಾಲಲ್ಲಿ ಕಾಣಿಸಿಕೊಳ್ಳುತ್ತವೆ.

ಈ ಆಯ್ಕೆಗಳೆಲ್ಲವೂ ಆ್ಯಂಡ್ರಾಯ್ಡ್ ಮತ್ತು ಐಫೋನ್ ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸಲಿದ್ದು, ಅದರೊಟ್ಟಿಗೆ ವೆಬ್ ಆವೃತ್ತಿ ಮತ್ತು ಮ್ಯಾಕ್ ಡೆಸ್ಕ್‌ಟಾಪ್ ಬಳಕೆದಾರರಿಗೂ ಲಭ್ಯವಿರಲಿವೆ. ಈ ಬಗ್ಗೆ ವಾಬೇಟಾಇನ್ಫೋ, ಮಾಹಿತಿ ಹಂಚಿಕೊಂಡಿದೆ. ಈ ಆಯ್ಕೆಗಳನ್ನು ವಾಟ್ಸ್ಆ್ಯಪ್‌ನ ಎಲ್ಲ ಚಾನಲ್ ಅಡ್ಮಿನ್‌ಗಳು, ತಮ್ಮ ಚಾನಲ್‌ಗಳಲ್ಲಿ ಪೋಸ್ಟ್‌ಗಳನ್ನು ರಚಿಸಲು ಸಹ ಬಳಸಬಹುದಾಗಿದೆ.

## ಬುಲೆಟ್ ಮತ್ತು ಸಂಖ್ಯಾ ಲಿಸ್ಟ್

ಒಂದರ ನಂತರ ಒಂದು ಬುಲೆಟ್ ಪಾಯಿಂಟ್ ನಮೂದಿಸಿ ಸಂದೇಶ ಕಳುಹಿಸಲು ಮತ್ತು ಒಟ್ಟಾರೆ ಟೆಕ್ಸ್ಟ್ ಮೆಸೇಜ್‌ನಲ್ಲಿ ಪ್ರಮುಖ ಅಂಶಗಳನ್ನು ಎದ್ದುಕಾಣುವಂತೆ ಮಾಡಲು ಇದು ಸಹಾಯಕ. ಉದಾಹರಣೆಗೆ, ವಾಟ್ಸ್ಆ್ಯಪ್ ಮೆಸೇಜಿಂಗ್ ಬಾರ್‌ನಲ್ಲಿ ಸ್ಟಾರ್ (*) ಟೈಪಿಸಿ, ಸ್ಪೇಸ್ ಕೊಟ್ಟು ಅದರ ಮುಂದೆ ವಾಕ್ಯ ಬರೆದು ಮತ್ತೊಂದು ಸಾಲಿಗೆ ಹೋಗುವ ಬಟನ್ ಒತ್ತಿದರೆ ಸ್ಟಾರ್ ತಾನಾಗಿಯೇ ಬುಲೆಟ್ ಆಗಿ ಮಾರ್ಪಾಡಾಗುತ್ತದೆ. ಇದೇ ರೀತಿ ಅಂಕಿ ಮತ್ತು ಪೂರ್ಣವಿರಾಮ ಟೈಪಿಸಿ ಸ್ಪೇಸ್ ಕೊಟ್ಟರೆ ಬರಹವನ್ನು ಅಂಕಿಗಳಿಂದ ಎದ್ದು ಕಾಣುವಂತೆ ಮಾಡಬಹುದು.

## ಬ್ಲಾಕ್ ಕೋಟ್, ಇನ್‌ಲೈನ್ ಕೋಡ್

ಬ್ಲಾಕ್ ಕೋಟ್ ಫಾರ್ಮ್ಯಾಟ್ ಆಯ್ಕೆಯು ಬಳಕೆದಾರರಿಗೆ ಟೆಕ್ಸ್ಟ್ ಅನ್ನು ಹೈಲೈಟ್ ಮಾಡಲು ನೆರವಾಗುತ್ತದೆ. ಇದು ಟೆಕ್ಸ್ಟ್‌ನ ಉಳಿದ ಭಾಗದಿಂದ ಮುಖ್ಯವಾದದ್ದನ್ನು ಪ್ರತ್ಯೇಕವಾಗಿಸಲು ಮತ್ತು ಓದುಗರ ಗಮನ ಸೆಳೆಯಲು ಅನುಕೂಲ. ಇದಕ್ಕಾಗಿ ಬಳಕೆದಾರರು > ಚಿಹ್ನೆಯನ್ನು ಟೈಪ್ ಮಾಡುವ ಮೂಲಕ ಟೆಕ್ಸ್ಟ್ ಹೈಲೈಟ್ ಮಾಡಬಹುದು. ಜೊತೆಗೆ ಇನ್‌ಲೈನ್ ಕೋಡ್ ಸಹ ಮೆಸೇಜಿಂಗ್ ವಿಧಾನದಲ್ಲಿ ಗಮನಾರ್ಹ ಬದಲಾವಣೆ ತೋರುತ್ತದೆ. ವಾಕ್ಯವೊಂದರ ನಡುವಿನ ಮಾಹಿತಿ ಅಥವಾ ಅಕ್ಷರವನ್ನು ಎದ್ದು ಕಾಣುವಂತೆ ಮಾಡಲು ಇದು ಸಹಾಯಕ. ಇದಕ್ಕಾಗಿ ಸಿಂಗಲ್ ಕೋಟ್(') ಅನ್ನು ಎದ್ದುಕಾಣಿಸಬೇಕಾದ ಅಕ್ಷರದ ಪ್ರಾರಂಭ ಮತ್ತು ಕೊನೆಯಲ್ಲಿ ನಮೂದಿಸಬೇಕು.

ಬೋಲ್ಡ್ ಮಾಡಲು ಈ ಹಿಂದೆ ಇದ್ದಂತಹ ಸ್ಟಾರ್ (*) ಆಯ್ಕೆಯನ್ನು ವಾಕ್ಯದ ಅಥವಾ ಅಕ್ಷರದ ಮೊದಲು ಮತ್ತು ಕೊನೆಯಲ್ಲಿ ಟೈಪಿಸಬೇಕು. ಈ ವಿಧಾನದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಇನ್ನು ಬರಹವನ್ನು ಇಟಾಲಿಕ್ ಮಾದರಿಯಲ್ಲಿ ಬದಲಾಯಿಸಲು ಅಂಡರ್‌ಸ್ಕೋರ್ ( _ ) ಅಕ್ಷರ ಅಥವಾ ವಾಕ್ಯದ ಕೊನೆಯಲ್ಲಿ ನಮೂದಿಸಬೇಕು. ■

### ಚಾನಲ್ ಸುಧಾರಣೆಗೆ ಹೊಸ ಇಂಟರ್‌ಫೇಸ್

ವಾಟ್ಸ್ಆ್ಯಪ್‌ನಲ್ಲಿ ಈಚೆಗೆ ಹೆಚ್ಚು ಸದ್ದು ಮಾಡುತ್ತಿರುವ ಚಾನಲ್‌ಗಳಲ್ಲಿ ಲಭ್ಯವಿರುವ ಫೀಚರ್‌ಗಳನ್ನು ಸುಧಾರಿಸುವ ಸಲುವಾಗಿ ಕಂಪನಿಯು ಹೊಸ ಇಂಟರ್‌ಫೇಸ್ ಅನ್ನು ಈಚೆಗೆ ಬಿಡುಗಡೆ ಮಾಡಿದೆ. ಇದರಿಂದ ಚಾನಲ್ ಬಳಕೆದಾರರಿಗೆ ಉತ್ಕೃಷ್ಟ ಅನುಭವ ನೀಡಲು ನೆರವಾಗಲಿದೆ. ಚಾನಲ್‌ನಲ್ಲಿ ಪಿನ್ನಿಂಗ್ ಫೀಚರ್ ಅನ್ನು ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಿದೆ.

ವರದಿಯ ಪ್ರಕಾರ, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ WhatsApp Android 2.24.4.19 ಬೀಟಾ ಅಪ್‌ಡೇಟ್‌ನಲ್ಲಿ ಹೊಸ ಇಂಟರ್‌ಫೇಸ್ ಬಗ್ಗೆ ಮಾಹಿತಿಯನ್ನು ಬಹಿರಂಗಪಡಿಸಲಾಗಿದೆ. ಇದನ್ನು ಪ್ರಸ್ತುತ ಬೀಟಾ ಬಳಕೆದಾರರಿಗೆ ಮಾತ್ರ ಬಿಡುಗಡೆ ಮಾಡಲಾಗುತ್ತಿದ್ದು, ಶೀಘ್ರವೇ ಇದನ್ನು ಎಲ್ಲ ಬಳಕೆದಾರರಿಗೆ ಮುಕ್ತಗೊಳಿಸಲು ಸಿದ್ಧತೆ ನಡೆಯುತ್ತಿದೆ ಎಂದಿದೆ ವಾಬೇಟಾಇನ್ಫೋ.

### ವೆಬ್ ಆವೃತ್ತಿ ಇನ್ನಷ್ಟು ಸುರಕ್ಷಿತ

ಮೊಬೈಲ್ ಆವೃತ್ತಿಯಲ್ಲಿ ಪರಿಚಯಿಸಿರುವಂತೆ ವೆಬ್ ಆವೃತ್ತಿಯಲ್ಲೂ ಬಳಕೆದಾರರಿಗೆ ಚಾಟ್ ಲಾಕ್ ಫೀಚರ್ ಪರಿಚಯಿಸಲು ವಾಟ್ಸ್ಆ್ಯಪ್ ಕಾರ್ಯೋನ್ಮುಖವಾಗಿದೆ.

ವಾಬೇಟಾಇನ್ಫೋ ಪ್ರಕಾರ, ವೆಬ್ ಕ್ಲೈಂಟ್‌ನಲ್ಲಿ ವೈಯಕ್ತಿಕ ಚಾಟ್‌ಗೆ ಲಾಕ್ ವ್ಯವಸ್ಥೆ ಕಲ್ಪಿಸಲು ಹಾಗೂ ಹೆಚ್ಚುವರಿ ಭದ್ರತೆ ಒದಗಿಸಲು ಚಾಟ್ ಲಾಕ್ ಫೀಚರ್ ಅನ್ನು ವಾಟ್ಸ್ಆ್ಯಪ್ ಕಲ್ಪಿಸಲು ತಯಾರಿ ನಡೆಸಿದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್‌ನ ವಾಟ್ಸ್ಆ್ಯಪ್‌ನಲ್ಲಿರುವಂತೆಯೇ ಚಾಟ್‌ಗಳನ್ನು ಲಾಕ್ ಹಾಗೂ ಅನ್‌ಲಾಕ್ ಮಾಡಲು ಪಾಸ್‌ಕೋಡ್, ಫಿಂಗರ್‌ಪ್ರಿಂಟ್ ಮತ್ತು ಫೇಸ್ ಐಡಿ ದೃಢೀಕರಣವನ್ನು ಇನ್‌ಪುಟ್ ಆಗಿ ಬಳಸುವ ಸಾಧ್ಯತೆ ಇದೆ. ವೆಬ್ ಆವೃತ್ತಿಯಲ್ಲಿ ಪಾಸ್‌ವರ್ಡ್‌ಗಳು ಅಥವಾ ಪಾಸ್‌ಕೀಗಳು, ಪಾಸ್‌ವರ್ಡ್‌ರಹಿತ ದೃಢೀಕರಣ ವಿಧಾನವನ್ನು ಬಳಕೆದಾರರಿಗೆ ಬಯೊಮೆಟ್ರಿಕ್‌ಗಳೊಂದಿಗೆ ಲಾಗ್ ಇನ್ ಮಾಡಲು ಅವಕಾಶ ಕಲ್ಪಿಸುವ ಸಾಧ್ಯತೆ ಇದೆ.